ದಿನಾಂಕಃ 01.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಮ್ಮ ತಾತನ ಹೆಸರು ಸೋಮಲಾನಾಯಕ. ನಮ್ಮ ತಾತನಿಗೆ 2 ಮಕ್ಕಳು, ಅವರ ಹೆಸರು ತಾವರೆ ನಾಯಕ ಮತ್ತು ಧಾಕ್ಯಾ ನಾಯಕ. ತಾವರೆ ನಾಯಕನ ಹೆಂಡತಿಯ ಹೆಸರು ಲಕ್ಷ್ಮೀ ಬಾಯಿ. ತಾವರೆ ನಾಯಕರವರು ಸುಮಾರು 2005 ರಲ್ಲಿ ಮೃತಪಟ್ಟಿರುತ್ತಾರೆ, ಹಾಗೂ ಅವರ ಹೆಂಡತಿ ಸಹ ಮೃತಪಟ್ಟಿರುತ್ತಾರೆ. ತಾವರೆ ನಾಯಕರವರಿಗೆ 6 ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು ಎಂದರೆ ಸರಿ. ತಾವರೆ ನಾಯಕರವರ ಮೊದಲನೆಯ ಮಗನ ಹೆಸರು ಕೃಷ್ಣಾ ನಾಯಕ ಎಂದರೆ ಸರಿ ಹಾಗೂ ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಕೃಷ್ಣಾ ನಾಯಕರವರ ಹೆಂಡತಿಯ ಹೆಸರು ಕಮಲೀ ಬಾಯಿ ಎಂದರೆ ಸರಿ. ತಾವರೇ ನಾಯಕರವರ 2 ನೇ ಮಗ ನಾರಯಣ ನಾಯಕ ಎಂದರೆ ಸರಿ ಹಾಗೂ ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿ.D4ರಿಂದ 7 ನೇ ಪ್ರತಿವಾದಿರವರುಗಳು ತಾವರೇ ನಾಯಕರವರ ಮಕ್ಕಳು ಎಂದರೆ ಸರಿ. ಅಮ್ಮಾ ಬಾಯಿ, ಸುಂದರ ಬಾಯಿ, ದೇವೀ ಬಾಯಿ ಮತ್ತು ಉನಕೀ ಬಾಯಿ ತಾವರೆ ನಾಯಕರಸವರ ಹೆಣ್ಣು ಮಕ್ಕಳು ಎಂದರೆ ಸರಿ. ಹೆಣ್ಣು ಮಕ್ಕಳನ್ನು ಸದರಿ ದಾವೆಯಲ್ಲಿ ಪಕ್ಷೀದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಧಾಕ್ಯಾ ನಾಯಕರವರು ನನ್ನ ತಂದೆ ಎಂದರೆ ಸರಿ ಹಾಗೂ ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರ ಹೆಸರುಗಳು ಏಮಲೀ ಬಾಯಿ ಮತ್ತು ಸಾಕೀ ಬಾಯಿ. ಏಮಲೀ ಬಾಯಿ ಮೊದಲನೆಯ ಹೆಂಡತಿ ಎಂದರೆ ಸರಿ. ಏಮಲೀ ಬಾಯಿ ನನ್ನ ತಾಯಿ ಎಂದರೆ ಸರಿ. ನನ್ನ ತಮ್ಮನ ಹೆಸರು ಜಾತ್ರೀ ನಾಯಕ ಎಂದರೆ ಸರಿ. ಹಾಗೂ ಅವರು ಮೃತಪಟ್ಟಿರುತ್ತಾರೆ. ಸಾಕೀ ಬಾಯಿಯವರಿಗೆ ಲಕ್ಷ್ಮಾ ನಾಯಕ ಮತ್ತು ವಾಸುದೇವ ನಾಯಕ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾಸುದೇವ ನಾಯಕ ಎಂಬುವವರು ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಲಕ್ಷ್ಮಾ ನಾಯಕರವರು ಊರಿನಲ್ಲಿ ವಾಸವಿದ್ದಾರೆ ಎಂದರೆ ಸರಿ.

ನಾನು ಕೆ ಜಿ ಐ ಡಿ ಯಲ್ಲಿ ಕರ್ತವ್ಯ ನಿರ್ವಹಿಸುತಿದ್ದು ಈಗ ನಿವೃತ್ತಿ ಹೊಂದಿರುತ್ತೇನೆ. ನಾನು ಕೆ ಜಿ ಐ ಡಿ ಯಲ್ಲಿ ಇದ್ದಾಗ ನನ್ನನ್ನು ಕೆಲಸದಿಂದ ಡಿಸ್ಮಿಸ್ ಮಾಡಿದರು ಎಂದರೆ ಸರಿಯಲ್ಲ. ನಾನು ಶಿರಾದಲ್ಲಿ ಹಾಗೂ ಉರಿನಲ್ಲೂ ಸಹ ವಾಸವಿರುತ್ತೇನೆ. ಜಾತ್ರಾ ನಾಯಕ,ಲಕ್ಷ್ಮಾ ನಾಯಕ ಮತ್ತು ವಾಸುದೇವ ನಾಯಕರವರನ್ನು ನಾನು ಸದರಿ ದಾವೆಯಲ್ಲಿ ಪಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಅವರನ್ನು ವಂಷವೃಕ್ಷದಲ್ಲಿ ಸೇರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನನಗೆ ಅನಿಲ್ ಮತ್ತು ಅಮಿತ್ ಎಂಬ ಇಬ್ಬರು ಮಕ್ಕಳು ಇದ್ದಾರೆ ಹಾಗೂ ಶೃತಿ

ಎಂಬ ಹೆಣ್ಣು ಮಗಳು ಇದ್ದಾರೆ ಎಂದರೆ ಸರಿ. ಜಾತ್ರಾನಯಕರವರ ಮಗ ಅರ್ಜುನ್ ನಾಯಕ ಹಾಗೂ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಲಕ್ಷ್ಮಾ ನಾಯಕರವರಿಗೆ ರಾಜಾನಯಕ ಹಾಗೂ ಗಂಗಾ ನಾಯಕ ಎಂಬ ಇಬ್ಬರು ಗಂಡು ಮಕ್ಕಳು ಇದ್ದಾರೆ ಎಂದರೆ ಸರಿ. ಲಕ್ಷ್ಮಾ ನಾಯಕರವರ ಹೆಂಡತಿ ಮೋತೀ ಬಾಯಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ರಾಜಾ ನಾಯಕರವರು ಕಿ ಯಿ ಬಿ ಅಲ್ಲಿ ಕೆಲಸಮಾಡಿಕೊಂಡಿದ್ದಾರೆ ಎಂದರೆ ಸರಿ. ಗಂಗಾ ನಾಯಕರವರು ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡುತಿದ್ದರು ಹಾಗೂ ಪ್ರಸ್ತುತ ಅವರು ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ. ವಾಸುದೇವ ನಾಯಕರವರ ಮಗನಿಗೆ ಅನುಕಂಪದ ಮೇರೆಗೆ ಉದ್ಯೋಗವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

ತಾವರೀ ನಾಯಕರವರು ಅವಿದ್ಯಾವಂತರು ಎಂದರೆ ಸರಿಯಲ್ಲ. ನನ್ನ ತಂದೆ ಅವಿದ್ಯಾವಂತರು ಎಂದರೆ ಸರಿ. ಸದರಿ ದಾವಾ ಸ್ವತ್ತಿನ ಸರ್ವೆ ನಂ.73/3 ಎರಡು ಎಕರೆ ಹದಿನೈದು ಗುಂಟೆ ಹಾಗೂ ಅದರ ಚಕ್ಕು ಬಂದಿ, ಪೂರ್ವಕ್ಕೆ ತಾವರೀ ನಾಯಕ ಬಿನ್ ಕಮಲಾ ನಾಯಕ ರವರ ಜಮೀನು, ಪಶ್ಚಿಮಕ್ಕೆ ತೋಣಚಪ್ಪ ರವರ ಜಮೀನು, ಉತ್ತರಕ್ಕೆ ಭೂತಯ್ಯರವರ ಜಮೀನು, ದಕ್ಷಿಣಕ್ಕೆ ಜಿ.ತಿಮ್ಮಯ್ಯರವರ ಜಮೀನು, ( ಜಮೀನನ್ನು ಜಯರಾಮ ನಾಯಕ ರವರು ಕೊಂಡುಕೊಂಡಿರುತ್ತಾರೆ) ಇರುತ್ತದೆ.

ಜಯರಾಮನಾಯಕರವರು ಸದರೀ ದಾವೆಯಲ್ಲಿ ಎರಡನೇ ಸಕ್ಷಿಯಾಗಿದ್ದಾರೆ ಎಂದರೆ ಸರಿ. ಸದರೀ ದಾವಾ ಸ್ವತ್ತಿಗೆ ನಾನು ಕಂದಾಯ ಕಟ್ಟಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಕಟ್ಟಿರುವ ಕಂದಾಯದ ರಶೀದಿಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅದು ಹಳೆಯ ದಾಖಲೆಗಳು ಆಗಿರುತ್ತವೆ ಎಂದು ನುಡಿದಿರುತ್ತಾರೆ.

ತಾವರೀ ನಾಯಕರವರ ಜಮೀನು ಪಿತ್ರಾರ್ಜಿತ ಆಸ್ತಿ. ದಾವಾ ಸ್ವತ್ತನ್ನು ದಿಃ19.10.1956 ರಲ್ಲಿ ನನ್ನ ದೊಡ್ಡಪ್ಪ ಕ್ರಯಕ್ಕೆ ಪಡೆದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ಪಿತ್ರಾರ್ಜಿತ ಆಸ್ತಿ ಎಂದು ನುಡಿದಿರುತ್ತಾರೆ. ಅಂದಿನಿಂದ ಅವರು ಸ್ವಾ ಧೀನದಲ್ಲಿದ್ದು ಕಂದಾಯವನ್ನು ಕಟ್ಟುತಿದ್ದಾರೆ ಎಂದರೆ ಸರಿಯಲ್ಲ. ದಿಃ24.04.1968 ರಲ್ಲಿ ದಾವಾ ಸ್ವತ್ತಿನ ಕುಲಾಸೆ ಪತ್ರವನ್ನು ಬರೆದಿದ್ದು ಅದರಲ್ಲಿ ನನ್ನ ತಂದೆಯ ಹೆಸರು ಕೈತಪ್ಪಿ ನಿಂದ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದು ತಿಳಿದಾಗ ತಾವರೀ ನಾಯಕರವರಿಗೆ ಹತ್ತು ಜನ ಮಕ್ಕಳಿದ್ದ ಕಾರಣ ಅವರು ದಾವಾ ಸ್ವತ್ತಿನಲ್ಲಿ ಇರಲು, ಊರಿನವರ ಮುಂದೆ ಪಂಚಾಯಿತಿ ನಡೆದು ನನ್ನ ತಂದೆಯವರು ಒಪ್ಪಿ ಕೊಂಡಿದ್ದರು ಎಂದರೆ ಸರಿಯಲ್ಲ. ಅಂದಿನ ಒಪ್ಪಂದದ ಪ್ರಕಾರ ತಾವರೀ ನಾಯಕರವರೇ ಜಮೀನನ್ನು ಅನುಭವಿಸಿಕೊಂಡು ಬರುತಿದ್ದಾರೆ ಎಂದರೆ ಸರಿಯಲ್ಲ. ತಾವರೀ ನಾಯಕರವರು

ದಿಃ29.07.2005 ರಲ್ಲಿ ಮೃತಪಟ್ಟರು ಎಂದರೆ ಸರಿ. ಅವರು ಮೃತಪಟ್ಟ ನಂತರ ಅವರ ಹೆಂಡತಿಯ ಹೆಸರಿಗೆ ದಾಖಲೆಗಳು, ಪಹಣಿ ಬದಲಾದವು ಎಂದರೆ ನನಗೆ ಗೊತ್ತಿಲ್ಲ. ದಿಃ 09.03.1996 ರಲ್ಲಿ ತಾವರೀ ನಾಯಕರವರ ಮಕ್ಕಳು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ತಲಾ 23 ಗುಂಟೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಸರಿಗೆ ದಾಖಲೆಗಳು ಬದಲಾವಣೆಯಾಗಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ತಂತಿಬೇಲಿಯನ್ನು ಹಾಕಿಕೊಂಡು ತೆಂಗಿನಮರಗಳನ್ನು ನೆಟ್ಟಿ ಸ್ವಾ ಧೀನಲ್ಲಿದ್ದಾರೆ ಎಂದರೆ ಸರಿಯಲ್ಲ. ದಿಃ22.10.2018 ರಲ್ಲಿ ನಾನು ಹಾಗೂ ನನ್ನ ಅಣ್ಣತಮ್ಮಂದಿರು ಕೌಟುಂಬಿಕ ಪಾಲು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಪಾಲು ವಿಭಾಗ ಪತ್ರದ ಪ್ರಕಾರ ನನಗೆ ಸರ್ವೆ ನಂ.78/5 ರಲ್ಲಿ ನನಗೆ 3 ಎಕರೆ 18 ಗುಂಟೆ ಜಮೀನು, ಸರ್ವೆ ನಂ.89/4 ರಲ್ಲಿ 1 ಎಕರೆ 20 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಅದೇ ರೀತಿಯಾಗಿ ಲಕ್ಷ್ಮಣ ನಾಯಕರವರ ಹಿಸ್ಸೇಗೆ, ಜಾತ್ರಾ ನಾಯಕರವರ ಹೆಂಡತಿಯಾದ ರೇಣುಕಾ ಬಾಯಿ ರವರಿಗೂ ಹಾಗೂ ವಾಸುದೇವನಾಯಕರವರ ಹಿಸ್ಸೆಗೆ ಜಮೀನು ಬಂದಿರುತ್ತದೆ ಎಂದರೆ ಸರಿ. ಲಕ್ಷ್ಮೀ ಬಾಯಿರವರ ಹೆಸರಿಗೆ ಪಾಣೀ ಖಾತೆಯಾಗಿದೆ ಎಂದರೆ ಸರಿ. ದಿಃ11.04.2024 ರಲ್ಲಿ ಎ ಡಿ ಎಲ್ ಆಫಿಸ್ ಗೆ ಅರ್ಜಿ ಕೊಟ್ಟು ಸದರೀ ಜಮೀನನ್ನು ಹದ್ದುಬಸ್ತು ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮಧುಗಿರಿ ಎ ಸಿ ಕೊರ್ಟ್ ನಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರೀ ಅರ್ಜಿ ವಜಾಗೊಂಡಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರೀ ಪ್ರಕರಣವನ್ನು ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಲು ಹಿಂಬರಹವನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.